ಜೊತೆ ಇರಲು ಒತ್ತಾಯ ಮಾಡಿದ್ದ. ಆದರೆ ಭಾಗ್ಯ ತನ್ನ ಅವ್ವನ ಸೆರಗು ಹಿಡಿದು ಹೊರಟುಹೋಗಿದ್ದಳು. ಆದರೆ ಇದಕ್ಕಿಂತ ಮಿಗಿಲಾಗಿ ತಿಂಗಳ ತಿಥಿ ದಿನ ಮನೆಯಲ್ಲಿ ನಡೆದ ರಾದ್ಧಾಂತ, ರಂಪ, ಜಗಳ ಇದನ್ನೆಲ್ಲಾ ನೋಡಿದ್ದ ಭಾಗ್ಯಳ ಮುಗ್ಧ ಮನಸ್ಸಿನಲ್ಲಿ ಅದು ತುಂಬಾ ಪರಿಣಾಮ ಬೀರಿಬಿಟ್ಟಿತ್ತು. ವರ್ಷದ ನಂತರ ಆಕೆ ಈಗ ತನ್ನವ್ವನ ಜೊತೆ ಬಂದಿದ್ದಳು. ಮನೆಯಲ್ಲಿ ಇವತ್ತೂ ಅವತ್ತಿನ ಹಾಗೆ ಎಲ್ಲಿ ಗಲಾಟೆ ಆದಾದೋ ಎಂಬ ಶಂಕೆ ಕೂಡ ಆಕೆಯ ಮನಸ್ಸಿನಲ್ಲಿ ತುಯ್ದಾಡುತ್ತಿದ್ದರಿಂದ ಅಳಲು ಶುರುಮಾಡಿದ್ದಳು. ಗೌರಿಯ ಆಗಮನದಿಂದ ಆಸ್ತಿ ಹಂಚಿಕೆ ಮಾಡಲು ಕೂತವರ ನಡುವೆ ಕ್ಷಣ ಗಾಢ ಮೌನ ಆವರಿಸಿತ್ತು. ಚಂದ್ರಪ್ಪ ಎಲ್ಲವನ್ನೂ ನೋಡುತ್ತಾ ದಿಗ್ಭ್ರಾಂತನಾಗಿ ಮೂಲೆಯಲ್ಲಿ ಕೂತಿದ್ದ. ರಾಜಣ್ಣನಿಗೆ ಗೌರಿ ಈ ಸಮಯದಲ್ಲಿ ಬಂದದ್ದು ಇಷ್ಟವಾಗದೆ, ಈ ವಿಷಯ ಯಾರಿಗೂ ಗೊತ್ತಾಗುವುದು ಬೇಡ ಅಂತ ಹೇಳಿದ್ದರೂ, ಚಂದ್ರಪ್ಪ ಬೇಕು ಅಂತಲೇ ತನ್ನ ಹೆಂಡತಿಗೆ ಹೇಳಿಕಳಿಸಿ ಕರೆಸಿಕೊಂಡವನೆ ಎಂಬ ಅನುಮಾನ ಬಂದು ಆತ ಸಿಟ್ಟೇರಿ ಕೂತಿದ್ದ. ಮುಕುಂದ ವರ್ಷಗಳ ಮೇಲೆ ಬಂದ ತನ್ನವ್ವನ ಕಂಡು ಓಡಿ ಹೋಗಿ ತನ್ನವ್ವನ ಸೆರಗು ಹಿಡಿದು ನಿಂತಿದ್ದ.

ಜವರನಿಗೆ ಮೊನ್ನೆ ದಿನ ಪೇಟೆಯಲ್ಲಿ ಗೌರಿಯ ಅಣ್ಣ ವೆಂಕಟೇಶ ಆಕಸ್ಮಿಕವಾಗಿ ಅಂಗಡಿಯಲ್ಲಿ ಸಾಮಾನು ತೆಗೆದುಕೊಳ್ಳುವಾಗ ಸಿಕ್ಕಿದ್ದಾಗ ಅವನ ಯೋಗ ಕ್ಷೇಮ ವಿಚಾರಿಸುತ್ತಾ, 'ನಿನ್ನ ಮಾವ ಚಂದ್ರಪ್ಪನಿಗೆ ಆಸ್ತಿ ಭಾಗ ಕೊಟ್ಟು ಕಳಿಸ್ತಾವ್ರೆ. ನಾಳೆ ಬರೋ ಭಾನುವಾರ ಅವರ ಮನೆಯಲ್ಲಿ ಮಾತುಕತೆ ಇಟ್ಕೊಂಡವ್ರಂತೆ. ನಿಮಗೆ ಗೊತ್ತಿಲ್ವೆ?' ಎಂದು ಕೇಳುತ್ತಾ, ವಿಷಯವನ್ನೆಲ್ಲಾ ಅವನಿಗೆ ಒಪ್ಪಿಸಿದ್ದ. ವೆಂಕಟೇಶ ಊರಿಗೆ ಹೋದ ಕೂಡಲೇ ತನ್ನ ತಂಗಿ ಗೌರಿ ಜೊತೆ ಮಾತನಾಡಿ ಭಾನುವಾರದ ದಿವಸ ಅವಳು ಮತ್ತು ಅವಳ ಮಗಳನ್ನು ಕಳಿಸಿದ್ದ.

ತನ್ನ ಅಣ್ಣ ವೆಂಕಟೇಶ ತನಗೆ ಹೇಳಿದಂತೆ ಗೌರಿ ತನ್ನ ಮಗಳು ಭಾಗ್ಯಳನ್ನು ಕರೆದುಕೊಂಡು ಅಂದು ಸರಿಯಾದ ಸಮಯಕ್ಕೆ ಅಲ್ಲಿಗೆ ಹಾಜರಾಗಿದ್ದಳು. ಈಚೆಗೆ ಆಕೆ ಇನ್ನೂ ಎಷ್ಟು ದಿನ ಅಂತ ತನ್ನ ತಂದೆಯ ಮನೆಯಲ್ಲಿ, ತನ್ನ ಅಣ್ಣ ಅತ್ತಿಗೆಯ ಕೈಕೆಳಗೆ, ತನ್ನ ಒಂಟಿಬಾಳನ್ನು ನಡೆಸುವುದೆಂದು ಪ್ರಶ್ನಿಸಿಕೊಂಡಿದ್ದಳು. ತನ್ನ ಹಟ ಹೋಗಿ ತನ್ನ ಗಂಡನ ಜೊತೆ ಹೊಂದಾಣಿಕೆ ಮಾಡಿಕೊಂಡು ಬದುಕುವುದೇ ಲೇಸು ಎಂಬ ತೀರ್ಮಾನಕ್ಕೆ ಬಂದಿದ್ದಳು. ಭಾಗ ಆದ ಮೇಲೆ ಕೈಯ್ಲಾಗದ ತನ್ನ ಗಂಡ ಒಂಟಿಯಾಗಿ, ತನ್ನ ಮಕ್ಕಳು ತಬ್ಬಲಿಗಳಾಗಿ ಬಿಡುತ್ತವೆ ಎಂದೆಲ್ಲಾ ಯೋಚಿಸಿ ಗಟ್ಟಿ ನಿರ್ಧಾರ ಮಾಡಿ ಬಂದಿದ್ದಳು. ಚಿನ್ನವ್ವನ ಸೊಸೆಗೆ, 'ನೀನು ಸರಿಯಾದ ಸಮಯಕ್ಕೇ ಬಂದೆ ಬಾರವ್ವ! ಇವತ್ತು ಇವರೆಲ್ಲಾ ಭಾಗ ಆಗ್ತಾ ಇದ್ದಾರೆ. ನಾಳೆಯಿಂದ



ನೀನೂ ನಿನ್ನ ಗಂಡನ ಜೊತೆ ಇರುವಂತೆ. ನೀನು, ನಿನ್ನ ಗಂಡ, ನಿನ್ನ ಮಕ್ಕಳು ಬಿಟ್ಟು ಮತ್ತೆ ನಿನ್ನ ತವರಿಗೆ ಹೋಗ್ಬೇಡ. ಅಲ್ಲಿ ಅವರು ಎಷ್ಟು ದಿನ ಅಂತ ನಿನ್ನ ನೋಡಾರು? ನಿಮ್ಮಣ್ಣ, ನಿಮ್ಮತ್ತಿಗೆಗೆ ಮತ್ತೆ ನೀನು ಅಲ್ಲಿಗೆ ಹೋಗಿ ಭಾರ ಆಗ್ಬೇಡ. ಇಷ್ಟು ವರ್ಷ ಆಗಿದ್ದೆಲ್ಲಾ ಒಂದು ಕೆಟ್ಟ ಕನಸು ಅಂತ ಮರೆತುಬಿಡು'ಎಂದು ಬುದ್ಧಿಮಾತು ಹೇಳತೊಡಗಿದಳು.

ಗೌರಿ ತನ್ನತ್ತೆಯ ಮಾತನ್ನು ಕೇಳುತ್ತಾ ಗಂಡನ ಮನೆಯಲ್ಲೇ ಇರಲು ನಿಶ್ಚಯಿಸಿಕೊಂಡಳು. ಚಂದ್ರಪ್ಪನಿಗೂ ತನ್ನ ಹೆಂಡತಿ, ತನ್ನ ಮಗಳು ಮತ್ತೆ ತನ್ನ ಬಳಿಗೆ ಬಂದದ್ದು ಒಳಗೊಳಗೇ ಅತಿ ಸಂತೋಷ ತಂದಿತ್ತು. ಅವನಿಗೆ ಲಕ್ವ ಹೊಡೆದಿದ್ದ ಕಾಲುಗಳಿಗೆ